<u>ಕರ್ನಾಟಕ ಸರ್ಕಾರದ ನಡವಳಿ</u>

ವಿಷಯ: ಶ್ರೀಮತಿ ಚಂದ್ರಮ್ಮ, ಉಪಾಧ್ಯಕ್ಷರು, ಕೊಡಗನೂರು ಗ್ರಾಮ ಪಂಚಾಯಿತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

<u>ಓದಲಾಗಿದೆ:</u>

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ಪತ್ರ ಸಂಖ್ಯೆ: ಜಿಪಂದಾಅ(2):ಗ್ರಾಪಂ:ಸಿಆರ್:59/2016-17, ದಿನಾಂಕ: 31.05.2017.
2. ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಗ್ರಾಅಪ:755:ಗ್ರಾಪಂಅ:2017, ದಿನಾಂಕ: 01.07.2017.
3. ಶ್ರೀಮತಿ ಚಂದ್ರಮ್ಮ ಇವರು ಸರ್ಕಾರದ ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 21.07.2017.
4. ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ಸಂಖ್ಯೆ:ಗ್ರಾಅಪ:755:ಗ್ರಾಪಂಅ:2017, ದಿನಾಂಕ: 14-08-2017 ಮತ್ತು 05.09.2017.

<u>ಪ್ರಸ್ತಾವನೆ :</u>

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ದಾವಣಗೆರೆ ಇವರು ಕೊಡಗನೂರು ಗ್ರಾಮ ಪಂಚಾಯತಿಗೆ ಸೇರಿರುವ ಬಸ್ ನಿಲ್ದಾಣ ಮತ್ತು ಅಂಗನವಾಡಿ ಕಟ್ಟಡ ಗಳನ್ನು ಕೊಡಗನೂರು ಗ್ರಾಮ ಪಂಚಾಯತಿಯ ಹಾಲಿ ಉಪಾಧ್ಯಕ್ಷರಾದ ಶ್ರೀಮತಿ ಚಂದ್ರಮ್ಮ ಮತ್ತು ಅವರ ಪತಿ ಶ್ರೀ ಹೆಚ್.ತಿಮ್ಮಪ್ಪ ಹಾಗೂ ಅವರ ಮಗ ಕೆ.ಟಿ.ಸುನೀಲ್ ಇವರು ಜೆ.ಸಿ.ಬಿ ಯಂತ್ರದಿಂದ ದಿ:31-07-2017 ರಂದು ಕೆಡವಿದ ಬಗ್ಗೆ ಪಿಡಿಓ ಕಡಗನೂರು ಇವರು ಈ ಪ್ರಕರಣದಲ್ಲಿ ಭಾಗಿಯಾದ ಶ್ರೀ ಹೆಚ್.ತಿಮ್ಮಪ್ಪ ಬಿನ್ ಹನುಮಂತಪ್ಪ ಮತ್ತು ಶ್ರೀ ಕೆ.ಟಿ.ಸುನೀಲ್ ಬಿನ್ ತಿಮ್ಮಪ್ಪ ಇವರ ವಿರುದ್ಧ ಮಾಯಕೊಂಡ ಪೋಲೀಸ್ ಠಾಣೆಯಲ್ಲಿ ದಿ:01-08-2016 ರಂದು ಮೊಕದ್ದಮೆ ದಾಖಲಿಸಿರುತ್ತಾರೆ.

ಕೊಡಗನೂರು ಗ್ರಾಮದ ರಂಗಶೆಟ್ಟರ ಮನೆಯಿಂದ ಹನುಮಂತಪ್ಪನವರ ಮನೆಯವರೆಗೆ ಸುಸ್ಥಿತಿಯಲ್ಲಿದ್ದ ಡಾಂಬರ್ ರಸ್ತೆಯನ್ನು ಕಿತ್ತು ಹಾಕಿರುವ ಬಗ್ಗೆ ಶ್ರೀ ಕೆ.ಬಿ.ನಾಗರಾಜಪ್ಪ ಮತ್ತು ಇತರರು ದೂರು ಸಲ್ಲಿಸಿದ ಹಿನ್ನಲೆಯಲ್ಲಿ ಗ್ರಾಮ ಪಂಚಾಯತಿ ಸದಸ್ಯರುಗಳು ಸ್ಥಳ ಮಹಜರ್ ಮಾಡಿ ದಿ:03-05-2017 ರ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ರಸ್ತೆ ಕಿತ್ತು ಹಾಕಲು ಕಾರಣರಾದ ಶ್ರೀಮತಿ ಚಂದ್ರಮ್ಮನವರ ಪತಿಯಾದ ಶ್ರೀ ಹೆಚ್ ತಿಮ್ಮಪ್ಪ ಇವರ ವಿರುದ್ಧ ಕಾನೂನು ಕ್ರಮ ಜರುಗಿಸಲು ತೀರ್ಮಾನ ಕೈಗೊಂಡು ದಿ:04-05-2017ರಂದು ಮಾಯಕೊಂಡ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ.

ಉಪಾಧ್ಯಕ್ಷರಾದ ಶ್ರೀಮತಿ ಚಂದ್ರಮ್ಮ ಇವರು ಅವರ ಪತಿಯಾದ ಶ್ರೀ ಹೆಚ್ ತಿಮ್ಮಪ್ಪ ಬಿನ್ ಹನುಮಂತಪ್ಪನವರಿಗೆ ಪರೋಕ್ಷವಾಗಿ ಬೆಂಬಲ ನೀಡಿರುವುದು ಕಂಡುಬರುತ್ತಿರುವುದರಿಂದ ಹಾಗೂ ಈ ಪ್ರಕರಣದಲ್ಲಿ ಇವರೂ ಸಹ ಭಾಗಿಯಾಗಿರುವುದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4) ರಡಿ ಕ್ರಮ ಜರುಗಿಸುವಂತೆ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ಜಿಲ್ಲೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ನೋಟೀಸಿನಲ್ಲಿ ಶ್ರೀಮತಿ ಚಂದ್ರಮ್ಮ ಇವರಿಗೆ ಕಾರಣ ಕೇಳುವ ನೋಟೀಸು ಜಾರಿ ಮಾಡಿ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಅವರ ಸಮಜಾಯಿಷಿ ಕೇಳಲಾಗಿತ್ತು.

ಈ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಸಲ್ಲಿಸಿರುವ ಉತ್ತರದಲ್ಲಿ ಕಾರಣ ಕೇಳಿ ನೋಟೀಸ್‌ಗೆ ನೀಡಿರುವ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸಮಜಾಯಿಷಿ ಪತ್ರದಲ್ಲಿ ಗ್ರಾಮಸ್ಥರು ವಿನಾ ಕಾರಣ ನನ್ನ ಮೇಲೆ ಸುಳ್ಳು ಆರೋಪ ಮಾಡಿರುತ್ತಾರೆ. ನಾನು, ನನ್ನ ಪತಿ ಹೆಚ್ ಶ್ರೀ ತಿಮ್ಮಪ್ಪ ಹಾಗೂ ನನ್ನ ಮಗನಾದ ಸುನೀಲ ಗ್ರಾಮ ಪಂಚಾಯತಿ ಆಸ್ತಿ, ಅಥವಾ ರಸ್ತೆಗಳಿಗೆ ಸಂಬಂಧಿಸಿದಂತೆ ಯಾವುದೇ ತಪ್ಪು, ಅಪರಾಧ, ಕಾನೂನು ವಿರೋಧಿ ಚಟುವಟಿಕೆಗಳನ್ನು ಮಾಡಿರುವುದಿಲ್ಲ. ಆದ್ದರಿಂದ ಪ್ರಕರಣವನ್ನು ಮುಕ್ತಾಯ ಮಾಡಲು ಕೋರಿರುತ್ತಾರೆ.

ಮೇಲೆ ಓದಲಾದ (4) ರನ್ವಯ ಶ್ರೀಮತಿ ಚಂದ್ರಮ್ಮ, ಉಪಾಧ್ಯಕ್ಷರು, ಕೊಡಗನೂರು ಗ್ರಾಮ ಪಂಚಾಯಿತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ವಿಚಾರಣೆ ಕರೆಯಲಾಗಿ ದಿನಾಂಕ:04-09-2017 ರಂದು ಜರುಗಿದ ವಿಚಾರಣೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ದಾವಣಗೆರೆ ತಾಲ್ಲೂಕು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೊಡಗನೂರು ಗ್ರಾಮ ಪಂಚಾಯತಿ ಹಾಗೂ ಆಪಾದಿತ ಉಪಾಧ್ಯಕ್ಷರು, ಹಾಜರಾಗಿರುತ್ತಾರೆ. ಜಿಲ್ಲಾ ಪಂಚಾಯತಿಯಿಂದ ತನಿಖಾ ವರದಿ ಸಲ್ಲಿಸುವಂತೆ ತಿಳಿಸಲಾಯಿತು. ದಿನಾಂಕ:24-10-2017 ರಂದು ಜರುಗಿದ ವಿಚಾರಣೆಯಲ್ಲಿ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ದಾವಣಗೆರೆ ಜಿಲ್ಲೆ, ಸಹಾಯಕ ನಿರ್ದೇಶಕರು(ಗ್ರಾ.ಉ), ತಾಲ್ಲೂಕು ಪಂಚಾಯತಿ, ದಾವಣಗೆರೆ ತಾಲ್ಲೂಕು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೊಡಗನೂರು ಗ್ರಾಮ ಪಂಚಾಯತಿ ಹಾಗೂ ಆಪಾದಿತ ಉಪಾಧ್ಯಕ್ಷರು, ಹಾಜರಾಗಿರುತ್ತಾರೆ. ಉಪಾಧ್ಯಕ್ಷರು ಹಾಗೂ ಅವರ ಪತಿ ಶ್ರೀ ಹೆಚ್. ತಿಮ್ಮಪ್ಪ ಹಾಗೂ ಉಪಾಧ್ಯಕ್ಷರ ಮಗ ಶ್ರೀ ಸುನೀಲ್ ರವರು ರಸ್ತೆಯನ್ನು ಕಿತ್ತು ಹಾಕಿರುತ್ತಾರೆಂದು ಜಿಲ್ಲಾ ಪಂಚಾಯತಿ ಅಧಿಕಾರಿಗಳು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಸರ್ಕಾರವು ಈ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ಧಾಖಲೆಗಳನ್ನು ಪರಿಶೀಲಿಸಲಾಗಿ, ಉಪಾಧ್ಯಕ್ಷರ ದುರ್ವರ್ತನೆ ಬಗ್ಗೆ ಯಾವುದೇ ಆಪಾದನೆ ಇರುವುದಿಲ್ಲ. ಅವರ ಪತಿ ಹಾಗೂ ಮಗ ಸರ್ಕಾರಿ ಆಸ್ತಿ ಹಾಳು ಮಾಡಿದ್ದಲ್ಲಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಆದೇಶಿಸಿದೆ. ಶ್ರೀಮತಿ ಚಂದ್ರಮ್ಮ ಉಪಾಧ್ಯಕ್ಷರು, ಕೊಡಗನೂರು ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 48(4) ಮತ್ತು 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಡಲು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/755/ಗ್ರಾಪಂಅ/2017, ಬೆಂಗಳೂರು, ದಿನಾಂಕ:09-04-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಚಂದ್ರಮ್ಮ, ಉಪಾಧ್ಯಕ್ಷರು, ಕೊಡಗಾನೂರು ಗ್ರಾಮ ಪಂಚಾಯಿತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ರವರ ದುರ್ವರ್ತನೆ ಬಗ್ಗೆ ಯಾವುದೇ ಆಪಾದನೆ ಇರುವುದಿಲ್ಲ. ಚಂದ್ರಮ್ಮ, ಉಪಾಧ್ಯಕ್ಷರು, ಕೊಡಗಾನೂರು ಗ್ರಾಮ ಪಂಚಾಯಿತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 48(4) ಮತ್ತು 43(ಎ) ರಡಿ ಜರುಗಿಸಬೇಕಾದ ವಿಚಾರಣೆಯನ್ನು ಕೈಬಿಡಲಾಗಿದೆ. ಶ್ರೀಮತಿ ಚಂದ್ರಮ್ಮ, ಉಪಾಧ್ಯಕ್ಷರು, ಕೊಡಗಾನೂರು ಗ್ರಾಮ ಪಂಚಾಯಿತಿ, ಇವರ ಪತಿ ಹಾಗೂ ಮಗ ಸರ್ಕಾರಿ ಆಸ್ತಿ ಹಾಳು ಮಾಡಿದ್ದಲ್ಲಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

10/4

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಾವಣಗೆರೆ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ದಾವಣಗೆರೆ, ದಾವಣಗೆರೆ ಜಿಲ್ಲೆ.
3. ಶ್ರೀಮತಿ ಚಂದ್ರಮ್ಮ, ಉಪಾಧ್ಯಕ್ಷರು, ಕೊಡಗನೂರು ಗ್ರಾಮ ಪಂಚಾಯಿತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.

4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಡಗನೂರು ಗ್ರಾಮ ಪಂಚಾಯಿತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.